"ಇದೆಂಥದು, ಇವನ್ಯಾರೋ ದೂರದ ಚೀರಾಲದಿಂದ ಬಂದು ನಮ್ಮೂರಿನ ರಸ್ತೆ ಪಕ್ಕದಲ್ಲಿ ಎಂತಕ್ಕೆ ಮನೆ ಮಾಡಿದ್ದಾನೆ. ಇದೊಳ್ಳೆ ರಗಳೆ ಮಾರ್ರೆ" ಅಂತ ಕೆಲವರು ರಾಗವೆಳೆದರು.

ಅದಕ್ಕವನು, "ಅಲ್ಲ ಅಣ್ಣಂದಿರೇ... ಎಲ್ಲಿಂದಲೋ ಬಂದ ಬಿಳಿಯರೇ ಈ ರಾಷ್ಟ್ರವನ್ನೇ ತಮ್ಮದು ಅಂತಿದ್ದಾರೆ. ಅಂಥಾದ್ದರಲ್ಲಿ ಹತ್ತಿರದ ಊರಿನವನು, ಮನೆಯಿಲ್ಲದವನು ಇಲ್ಲಿದ್ದರೆ ತಪ್ಪಾ?" ಎಂದುತ್ತರಿಸಿದ.

ಇವನ ಮಾತು, ಸೌಮ್ಯವಾದ ನಡವಳಿಕೆ ನೋಡಿ ಜನ 'ಇರಲಿ ಬಿಡು' ಎಂದು ಸುಮ್ಮನಾದರು. ಕಾವಲಿ ಎಂಬ ಆ ಊರಿನವರು ಅವನನ್ನು ಒಪ್ಪಲು ಇನ್ನೊಂದು ಮುಖ್ಯ ಕಾರಣವಿತ್ತು. ಅದೇ ಪೆಂಡೆಂ ಚಂದ್ರಣ್ಣನ ಸೋಡಾ ಗ್ಯಾಸ್ ತುಂಬಿದ್ದ ಸಿಲಿಂಡರನ್ನು ಮೂಲೆಗೆ ನಿಲ್ಲಿಸಿ ಸೀಸೆಗಳಿಗೆ ನೀರು, ಗೋಲಿ ಬಿಗಿಯಾಗುವ ಹಾಗೆ ಗ್ಯಾಸ್ ತುಂಬಿಸಿ, ನೀರಿನ ತೊಟ್ಟಿಯಲ್ಲಿ ಸೀಸೆಗಳನ್ನಿಟ್ಟು, ತಂಪಾಗಿಸಿ, ಬಂದವರಿಗೆ 'ಸೊಯ್...' ಎಂಬ ದೊಡ್ಡ ಸದ್ದಿನೊಂದಿಗೆ ಹೊಡೆದು ಕೊಡುತ್ತಿದ್ದ ಗೋಲಿ ಸೋಡಾ ರುಚಿಗೆ ಊರಿನವರು ನಾಲ್ಕೇ ದಿನದಲ್ಲಿ ಮರುಳಾಗಿಬಿಟ್ಟಿದ್ದರು.

ಅಲ್ಲಿಯವರೆಗೆ ಅವರು ಆ ಪರಿ ಗ್ಯಾಸ್ ತುಂಬಿದ್ದ ಸೋಡಾ ಕುಡಿದಿರಲಿಲ್ಲ, ಸೋಡಾ ಕುಡಿದು ಅಷ್ಟು ತೃಪ್ತಿಯಿಂದ ತೇಗಿದ್ದಂತೂ ಇಲ್ಲವೇ ಇಲ್ಲ.

"ಅದು ಹೇಗೆ ಇಷ್ಟು ಒಳ್ಳೆ ಸೋಡಾ ತಯಾರು ಮಾಡೋದನ್ನು ಕಲಿತೆ ಮಾರಾಯ?" ಅಂತ ಕೇಳಿದರೆ, ನಕ್ಕು ಸುಮ್ಮನಾಗಿಬಿಡುತ್ತಿದ್ದ ಚಂದ್ರಣ್ಣ.

ಎಲ್ಲಿ ಕಲಿತನೋ ಏನೋ ಎಂಬುದು ಗೊತ್ತಾಗದಿದ್ದರೂ ಸೋಡಾ ಆ ಊರಿನ ಜನರಿಗೆ ರೂಢಿಯಾಗಿ, ಸಂಜೆಯ ಹೊತ್ತಿಗೆ ಚಂದ್ರಣ್ಣನ ಸೋಡಾ ಹೊಟ್ಟೆಗಿಳಿದರೆ ಸಾಕು ಆರಾಮವೆನಿಸುತ್ತೆ ಮಾರ್ರೆ!... ಅನ್ನುವಂತಾಯಿತು.

ಈ ಮಾತು ಎಲ್ಲರ ಬಾಯಲ್ಲೂ ಬಂದು ವ್ಯಾಪಾರ ಜಾಸ್ತಿಯಾಯಿತು. ನೀರಿನ ತೊಟ್ಟಿ ಎರಡಿದ್ದದ್ದು ನಾಲ್ಕಾಯಿತು. ಪಾರ್ಸಲ್ ಮಾಡೋ ಸೋಡಾ ಕೇಸ್‌ಗಳು ಆರರಿಂದ ಹನ್ನೆರಡಾದವು. ನಿಧಾನವಾಗಿ ಅಲ್ಲಿದ್ದ ಗುಡಿಸಲಿನ ಬದಲಿಗೆ ನಾಲ್ಕೂ ಕಡೆ ಗೋಡೆಗಳು ಎದ್ದು ನಿಂತವು. ಅದರ ಮೇಲೆ ಹೆಂಚಿನ ಮಾಡು ಸೇರಿತು. ಇದೆಲ್ಲ ಒಂದು ಹಂತಕ್ಕೆ ಬಂದ ನಂತರ ಮುಂಬಾಗಿಲಿನ ಹತ್ತಿರ ಕಟ್ಟಿದ್ದ ಅಗಲವಾದ ರಟ್ಟಿನ ಮೇಲೆ ಈ ರೀತಿ ಬರೆದಿತ್ತು. "ಹರಿಜನರಿಗೂ ದೇವಸ್ಥಾನದ ಪ್ರವೇಶದ ಅವಕಾಶವಾಗಬೇಕು." "ಪೊಟ್ಟಿ ಶ್ರೀರಾಮುಲು ಅವರ ಸಂದೇಶ. 'ವಂದೇ ಮಾತರಂ' ಇದು ಪೆಂಡೆಂ ಸೋಡಾ ಸೆಂಟರ್‌ನ ಕರೆ."

ಇದನ್ನು ನೋಡಿ ಕಾವಲಿಯ ಜನ, "ಇದೇನಿದು ಚಂದ್ರಣ್ಣಾ, ನೀನೂ ರಾಜಕೀಯಕ್ಕೆ ಇಳಿದಿದ್ದೀಯೋ ಹೇಗೆ ಮಾರಾಯ" ಅಂದದ್ದಕ್ಕೆ,

"ಛೇ, ಛೇ... ಅಂಥದ್ದೇನಿಲ್ಲ ಅಣ್ಣಾ. ನಾನೊಬ್ಬ ಗಾಂಧೀವಾದಿ, ಅಷ್ಟೇ ಮಾರ್ರೆ" ಎಂದು ಉತ್ತರಿಸುತ್ತಿದ್ದ.

ಸ್ವಲ್ಪ ಸಮಯದಲ್ಲೇ ಚಂದ್ರಣ್ಣನ ವ್ಯಾಪಾರ ಚೆನ್ನಾಗಿ ಬೆಳೆಯಿತು. ನಾಲ್ಕು ಕಾಸು ಕೈಸೇರಿತ್ತು. ಆದರೆ ಅದೆಲ್ಲವನ್ನು ಸ್ವಾತಂತ್ರ್ಯ ಚಳವಳಿಗೋ, ಕಾಂಗ್ರೆಸ್ ಪಕ್ಷಕ್ಕೋ ಮತ್ತಿನ್ಯಾವುದಕ್ಕೋ ಖರ್ಚು ಮಾಡಿಬಿಡ್ತಾನೇನೋ ಅಂತ ಹೆದರಿದ ಚಂದ್ರಣ್ಣನ ಸಂಬಂಧಿಕರು ಒಳ್ಳೆಯ ಹುಡುಗಿಯನ್ನ ನೋಡಿ ಮದುವೆ ಮಾಡಿಸಿಬಿಟ್ಟರು.

ಆ ಹುಡುಗಿ ಬಲು ಚೂಟಿ. ಬರುತ್ತಲೇ ಸೋಡಾ ಸೀಸೆಯಲ್ಲಿನ ಗೋಲಿಯಂತೆ ಚಂದ್ರಣ್ಣನಿಗೆ ಹೊಂದಿಕೊಂಡಳು.

"ಲಕ್ಷ್ಮಮ್ಮಾ, ನೀರು ತುಂಬಿಸಿದ್ದೀಯಾ?'' ಎಂದರೆ,